sultation) (Sixteenth Amendment) (Amendment) Regulations, 1980.
as required by Article 320(5) of the Constitution of India.

(v) Annual Report of the Karnataka Public Service Commission and Government Memorandum for the year 1974-75. as required under Article 323(2) of the Constitution of India,

MR. DEPUTY SPEAKER.—Papers laid.

## CALLING ATTENTION TO MATTERS OF URGENT PUBLIC IMPORTANCE

*re.—Agitation by Tobacco Growers at Nippani on 14th and 15th of March 1981.*

SRI B. B. SAYANAK.—Sir, I call the attention of the Chief Minister to the agitation by Tobacco growers at Nippani on 14th and 15th March, 1981 demanding reasonable price for their Tobacco.

SRI M. VEERAPPA MOILY (Minister for Finance and Tourism).—Sir on behalf of the Hon'ble Chief Minister I wish to make the following statement.—

It is ascertained that large number of farmers are agitating for getting a fair price for bidi tobacco as they are being exploited by the private merchants. The agitation has created blocking of traffic on the Poona-Bangalore National High Way resulting in law and order situation.

It is reported that the merchant are quoting very low rates for the produce as it is monopolised by few private traders. There is no uniformity in weighment and commission charges. Tobacco is already covered under the Agricultural Produce Marketing Act. But the market practices have not been regularised as per the marketing rules and regulations. It seems the produce is not brought into the regulated market yard for sale as the private traders resort to the boycott of such sales Farmers are therefore forced to sell their produce to the private traders outside the market yard where malpractices in the marketing is followed.

In view of the above, farmers are demandig a minimum support price of Rs. 10 to Rs. 15 per Kg. based on their estimated cost of production. The representatives of the farmers have stated that cost of production is Rs. 11.40 a kg. They are also insisting on procurement of the produce by the Government agencies at remunerative prices.

The cost of production of bidi tobacco as estimated based on the recommended package of practices of the Department works out to Rs. 4.59 per kg. even including both variable and fixed costs. Hence, the cost of production as furnished by the farmers is unrealistic and inflated. Farmers are now getting a price range of Rs. 5 to 8 a kg. according to the grades. However, it may be necessary to regulate and standardise the market practices to avoid exploitation by the private traders. The support price for tobacco cannot be fixed by the State Government as it is coming under the purview of the Government of India which has to declare support price for tobacco also as in the case of other agricultural commodities based on the recommendations of the Agricultural Prices Commission.

The responsibility of Government is involved only to a limited extent, as this Bidi tobacco is also coming under the purview of the Tobacco Board Act of 1975.

(SRI H. T. KRISHNAPPA IN THE CHAIR)

SRI B. B. SAYANAK (Belgaum).—Mr. Chairman, Tobacco agriculturists and their leaders have declared 20 days back that they are going to start agitation and road blockade in cases the tobacco price are not increased reasonably. At present they are not getting reasonable prices for their produce. Today also the agitation as well as the road blockade are going on. It is the duty of the State Government to maintain law and order. I know the rate fixing responsibility vests with the Central Government, but this is a matter which comes under the Agricultural produce Marketing Act. Therefore, why the Government have not taken any action to bring tobacco under A P.M.C. ? As a result of blockade, there is lot of inconvenience to the vehicular traffic as well as the public. No vegetables and food grains are going to Nippani and people round about Nippani are very much inconvenienced. So, I request the Government to take initiative in starting negotiations with the leaders of agriculturists and merchants.

ಶ್ರೀ ಎ. ಬಿ. ಬೇಡಗಿ (ಸಾದಲಗ).—ಮಾನ್ಯ ಅಧ್ಯಕ್ಷರೇ, ಬೀಡಿ ತಂಬಾಕು ಬೆಳೆಗಾರರು ರಸ್ತೆ ಬ್ಲಾಕ್ ಮಾಡುವ ವ್ಯೂಹವನ್ನು ಎರಡು ದಿವಸ ಮಾಡಿ ನಂತರ ಬೀಡಿ ತಂಬಾಕು ಬೆಳೆಯುವವರ ಸಂಘದಿಂದ ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ಒಂದು ನಿಯೋಗ ಬಂದಿದ್ದು ೧೭ನೇ ತಾರೀಖು ಸಂಜೆ ಮಾನ್ಯ ಮುಖ್ಯ ಮಂತ್ರಿಗಳು ನಿಯೋಗದ ಭೇಟಿ ಮಾಡಿದ್ದರು ಆ ಸಮಯದಲ್ಲಿ ನಮ್ಮ ಕಾರ್ಮಿಕ ಮಂತ್ರಿಗಳಾದ ಜಕನೂರ್ ಅವರು ಸಹಕಾರ ಮಂತ್ರಿಗಳಾದ ಶ್ರೀಕಂಠಯ್ಯನವರು, ಅಲ್ಲದೆ ಗೌರವಯುತವಾದ ವಿರೋಧಪಕ್ಷದ ಮುಂದಾಳುಗಳಾದ ಶ್ರೀ ದೇವೇಗೌಡರು, ಬೊಮ್ಮಾಯಿಯವರು ಕೂಡ ಇದ್ದರು. ಮುಖ್ಯವಾಗಿ ಬೆಳಗಾಂ ಜಿಲ್ಲೆ ಚಿಕ್ಕೋಡಿ ಭಾಗದಲ್ಲಿ ತಂಬಾಕು ಬೆಳೆಗಾರರಿಗೆ ಯೋಗ್ಯ ಬೆಲೆ ಕೊಡಬೇಕೆಂದು ಚಳುವಳಿ ಹೂಡಿದ್ದಾರೆ. ಆದರ ಅಂಗವಾಗಿ ನಿನ್ನೆಯಿಂದ ಸಾವಿರಾರು ರೈತರು ನೂರಾರು ಗ್ರಾಮಗಳಿಂದ ಬಂದು ಪೂನಾ ಬೆಂಗಳೂರು ಹೆದ್ದಾರಿಯಲ್ಲಿ ಬಂದ್ ಕಾರ್ಯಕ್ರಮ ಕೈಗೊಂಡಿದ್ದಾರೆ. ಕಷ್ಟಪಟ್ಟು ರೈತರು ಉತ್ಪಾದಿಸಿರುವ ತಂಬಾಕಿಗೆ ಯೋಗ್ಯ ಬೆಲೆ ಕೊಡಬೇಕೆಂಬ ರೈತರ ವಾದವನ್ನು

ಮನ್ನಿಸಿ ಅವರ ಬೇಡಿಕೆ ಬಗ್ಗೆ ಸರ್ಕಾರ ಕೂಡಲೇ ಗಮನಹರಿಸಿ ಸಹಾನುಭೂತಿಯಿಂದ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಂಡು ರೈತರ ಸಮಸ್ಯೆಗಳನ್ನು ಮತ್ತಿತರ ಬೃಹತ್ ಸಮಸ್ಯೆಗಳನ್ನು ಬಿಡಿಸಿ ಯಶಸ್ಸು ಸಾಧಿಸುವುದರಲ್ಲಿ ಭಾರತದಲ್ಲೇ ಅಗ್ರಗಣ್ಯ ಸ್ಥಾನ ಪಡೆದಿರುವ ನಮ್ಮ ಮುಖ್ಯ ಮಂತ್ರಿಗಳು ಈ ಬಗ್ಗೆ ಗಮನಹರಿಸಿ ಸಮಸ್ಯೆಯನ್ನು ಬಿಡಿಸುತ್ತಾರೆಂಬ ಆಶಯ ಇದೆ. ಯೋಗ್ಯ ಬೆಲೆ ಕೊಡುವುದರ ಜೊತೆಗೆ ತೂಕ ಅಳತೆ ಮತ್ತು ಮಾರ್ಕೆಟಿಂಗ್ ವ್ಯವಸ್ಥೆಯಲ್ಲಿ ಕೂಡ.....

ಚೇರ್ಮನ್.—ಗಮನ ಸೆಳೆಯುವ ಸೂಚನೆಯಲ್ಲಿ ಸ್ಪಷ್ಟೀಕರಣ ಮಾತ್ರ ಕೇಳುವುದಕ್ಕೆ ಅವಕಾಶ ವಿದೆಯೇ ಹೊರತು ಭಾಷಣ ಮಾಡುವುದಕ್ಕೆ ಅವಕಾಶವಿಲ್ಲ. ಮಾನ್ಯ ಮಂತ್ರಿಗಳ ಹೇಳಿಕೆ ಬಗ್ಗೆ ಏನಾದರೂ ಸ್ಪಷ್ಟೀಕರಣ ಕೇಳುವುದಿದ್ದರೆ ಕೇಳಿ.

ಶ್ರೀ ಎ.ಬಿ. ಬೇಡಗಿ.—ಬೀಡಿ ತಂಬಾಕುಗಳ ಬೆಲೆ ನಿಗದಿ ಮಾಡುವುದು ಕೇಂದ್ರ ಸರ್ಕಾರವಾದರೂ ನಮ್ಮ ಮುಖ್ಯ ಮಂತ್ರಿಗಳು ಪೆಚ್ಚಿನ ಗಮನಹರಿಸಿ ರೈತರಿಗೆ ಯೋಗ್ಯ ಬೆಲೆ ಸಿಗುವಂತೆ ಪ್ರಯತ್ನ ಮಾಡುವ ಬಗ್ಗೆ ಭರವಸೆ ಕೊಟ್ಟು ಈಗ ರೋಡ್ ಬ್ಲಾಕ್ ಮಾಡಿರುವುದನ್ನು ತೆರವು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಪೆಚ್.ಎಲ್. ತಿಮ್ಮೇಗೌಡ (ಬಸವನಗುಡಿ).—ಬೀಡಿ ತಂಬಾಕಿನ ವಿಚಾರದಲ್ಲಿ ಅಗ್ರಿಕಲ್ಚರಲ್ ಪ್ರೈಸ್ ಕಮೀಷನ್‌ರವರ ಶಿಫಾರಸಿನ ಮೇಲೆ ಸಪೋರ್ಟ್ ಪ್ರೈಸನ್ನು ಕೇಂದ್ರ ಸರ್ಕಾರದವರು ಕೊಡಬೇಕು ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆಂಧ್ರಪ್ರದೇಶ ಸರ್ಕಾರದವರು ಇದೇ ರೀತಿ ಬೆಲೆ ಕಡಿಮೆ ಯಾದಾಗ ಸಪೋರ್ಟ್ ಪ್ರೈಸ್ ಕೊಡುವುದಕ್ಕೆ ಟೊಬ್ಯಾಕೋ ಬೋರ್ಡ್ ಸ್ಥಾಪನೆ ಮಾಡಿ ಟೊಬ್ಯಾಕೋ ಬೆಳೆಯುತಕ್ಕ ರೈತರಿಗೆ ಒಳ್ಳೆಯ ಬೆಲೆ ಸಿಗುವಂತೆ ಮಾಡಿದರು ಎಂದು ಪತ್ರಿಕೆಯಲ್ಲಿ ಓದಿದೆ. ಆದ್ದರಿಂದ ನಮ್ಮ ಸರ್ಕಾರ ಕೂಡ ಅದೇ ರೀತಿ ಮಾಡುವ ಪ್ರಯತ್ನ ಮಾಡಬೇಕು. ಸುಮ್ಮನೆ ತಮ್ಮ ಹೊರೆಯನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಕೇಂದ್ರ ಸರ್ಕಾರದ ಕಡೆ ತೋರಿಸಿದರೆ ಸಾಲದು. ನಮ್ಮ ಹುಣಸೂರು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಮೊದಲು ಹೆಚ್ಚಾಗಿ ಬೀಡಿ ತಂಬಾಕನ್ನು ಬೆಳೆಯುತ್ತಿದ್ದರು. ಆದರೆ ವ್ಯಾಪಾರಗಾರರು ತಂಬಾಕು ಕಡಿಮೆ ಬೆಲೆ ಕೊಡುತ್ತಿರುವುದರಿಂದ ಈಗ ತಂಬಾಕು ಬೆಳೆಯುವುದನ್ನು ಬಿಟ್ಟಿದ್ದಾರೆ ಸಪೋರ್ಟ್ ಪ್ರೈಸ್ ಕೊಡದಿರುವುದರಿಂದ ರೈತರಿಗೆ ಅನಾನುಕೂಲವಾಗುತ್ತದಾದ್ದರಿಂದ ಸರ್ಕಾರದವರು ಸಪೋರ್ಟ್ ಪ್ರೈಸ್ ವಿಚಾರದಲ್ಲಿ ಅಗ್ರಿಕಲ್ಚರ್ ಪ್ರೈಸ್ ಕಮಿಷನ್‌ನವರ ಶಿಫಾರಸಿನ ಮೇಲೆ ಕೇಂದ್ರ ಸರ್ಕಾರದವರು ಕೊಡಬೇಕು ಎಂಬ ನಿಲುವನ್ನು ಬದಲಾಯಿಸಿಕೊಂಡು ಮೈಸೂರು ಟೊಬ್ಯಾಕೋ ಕಂಪನಿ ಮುಖಾಂತರ ಅಥವಾ ಇನ್ಯಾವುದಾದರೂ ಏಜೆನ್ಸಿ ಮುಖಾಂತರ ಸಪೋರ್ಟ್ ಪ್ರೈಸ್ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ತಕ್ಷಣ ಅಧಿಕಾರಿಗಳನ್ನು ಕರೆಸಿ ತಂಬಾಕು ಬೆಳೆಗಾರರ ವಿಷಯದಲ್ಲಿ ಮಾತನಾಡಿ ಆದಷ್ಟು ಜಾಗ್ರತೆ ಪರಿಹಾರ ಕೊಟ್ಟು ಈ ಹೆದ್ದಾರಿಯಲ್ಲಿ ಬಂದ್ ಏನು ಮಾಡುತ್ತಿದ್ದಾರೆ ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಜಿ.ಕೆ. ತಕ್ಕೇದ್.—ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯಲ್ಲಿರುವ ತಂಬಾಕು ಬೆಳೆಯುವ ರೈತರಿಗೆ ವ್ಯಾಪಾರಸ್ಥರು ಶೋಷಣೆ ಮಾಡುತ್ತಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ ಎಂಬ ಮಾತನ್ನು ಇಲ್ಲಿ ಹೇಳಿದ್ದಾರೆ. ತೂಕ ಮಾಡುವ ವಿಷಯದಲ್ಲೂ ಕೂಡ ಅನುಕೂಲಕರವಾದ ವ್ಯವಹಾರವನ್ನು ಪ್ರಾಮಾಣಿಕ ರೀತಿಯಿಂದ ವ್ಯಾಪಾರಸ್ಥರು ಮಾಡಿಲ್ಲ. ತೂಕ ಮತ್ತು ಅಳತೆ ಮಾಡುವ ವಿಷಯದಲ್ಲಿ ಈ ರೀತಿ ಅನ್ಯಾಯ ಮಾಡುತ್ತಿದ್ದರೂ ಕೂಡ ಸರ್ಕಾರದವರು ವ್ಯಾಪಾರಸ್ಥರ ಮೇಲೆ ಯಾವ ವಿಧವಾದ ಕ್ರಮವನ್ನೂ ಕೈಗೊಂಡಿಲ್ಲ. ರೈತರ ಶೋಷಣೆ ಆಗುತ್ತಿದ್ದರೂ ಕೂಡ ಸರ್ಕಾರೀ ಅಧಿಕಾರಿಗಳು ಕಣ್ಣು ಮುಚ್ಚಿಕೊಂಡು ರೈತರ ಶೋಷಣೆ ಮಾಡಲಿಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ ಎಂಬ ಮಾತನ್ನು ಒಪ್ಪುಕೊಂಡತ್ತಾಗಿದೆ. ಇದರ ಬಗ್ಗೆ ತಾವು ಯಾವ ಕ್ರಮ ಕೈಗೆದುಕೊಳ್ಳುತ್ತೀರಿ ಎಂಬುದನ್ನು ಈಗಲಾದರೂ ಹೇಳಿ. ಈ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟ ಮೇಲಾದರೂ ಕೂಡ ಸರ್ಕಾರೀ ಅಧಿಕಾರಿಗಳು ಎಷ್ಟು ವ್ಯಾಪಾರಸ್ಥರ ಮೇಲೆ ಕೇಸ್ ಹಾಕಿದ್ದಾರೆ? ಗೋಕಾಕ್ ತಾಲ್ಲೂಕಿನಲ್ಲಿ, ಹುಕ್ಕೇರಿ ತಾಲ್ಲೂಕಿನಲ್ಲಿ, ಚಿಕ್ಕೋಡಿ ತಾಲ್ಲೂಕಿನಲ್ಲಿ ರೈತರಿಗೆ ಹೆಚ್ಚು ರೊಕ್ಕದ ಬೆಳೆ ತಂಬಾಕು ಬೆಳೆಯಾಗಿದ್ದು ಈ ಬೆಳೆಗಾರರ ಶೋಷಣೆಯಾಗುತ್ತಿರುವುದರ ಬಗ್ಗೆ ಸುಮಾರು ೮-೧೦ ವರ್ಷಗಳಿಂದಲೂ ರೈತರು ಸರ್ಕಾರದ ಗಮನಕ್ಕೆ ತರುತ್ತಿದ್ದರೂ ಕೂಡ, ತೂಕ ಅಳತೆ ಇಲಾಖೆಯವರಾಗಲೀ, ಮಾರ್ಕೆಟಿಂಗ್

ಇಲಾಖೆಯ ಅಧಿಕಾರಿಗಳಾಗಲೀ ಕ್ರಮ ತೆಗೆದುಕೊಂಡು ವ್ಯವಸ್ಥಿತ ರೀತಿಯಲ್ಲಿ ತಂಬಾಕು ಮಾರ್ಕೆಟ್ಟಿಗೆ ಬಂದು ಯೋಗ್ಯಬೆಲೆ ರೈತರಿಗೆ ಸಿಗುವಂತೆ ವ್ಯವಸ್ಥೆ ಮಾಡಿಲ್ಲ. ಇವತ್ತು ತಂಬಾಕು ಬೆಳೆ ಪರದೇಶಿ ಬೆಳೆಯಾಗಿದೆ. ಹೆಚ್ಚಿನ ಬೆಲೆ ಬರುತ್ತದೆಂದು ಸಾಕಷ್ಟು ದುಡ್ಡನ್ನು ಹಾಕಿ, ಬೆಳೆ ಬೆಳೆದು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ತಂಬಾಕು ಮಾರಿದರೂ ೨-೩ ದಿವಸಗಳಾದರೂ ದುಡ್ಡು ರೈತರ ಕೈಗೆ ಬರುತ್ತಿಲ್ಲ.

ಚೇರ್ಮನ್.—ಗಮನ ಸೆಳೆಯುವ ಸೂಚನೆ ಮೇಲೆ ಇದೆಲ್ಲಾ ಮಾತನಾಡುವುದಕ್ಕೆ ಬರುವುದಿಲ್ಲ. ಏನು ಬೇಕೋ ಅದನ್ನು ಹೇಳಿ.

ಶ್ರೀ ಜಿ.ಕೆ. ತಕ್ಕೇದ್.—ಸ್ವಾಮಿ, ಸರ್ಕಾರದವರು ಹಾರಿಕೆ ಉತ್ತರ ಕೊಟ್ಟಿದ್ದಾರೆ; ಅಧಿಕಾರಿಗಳು ತಮ್ಮ ಹೊಣೆಯಿಂದ ಜಾರಿಕೊಳ್ಳುವುದಕ್ಕೆ ಕೊಟ್ಟಂತ ಉತ್ತರ. ಪೂನಾ ಮತ್ತು ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ೪ರಲ್ಲಿ ಕಳೆದ ೮-೧೦ ದಿವಸಗಳಿಂದ ದೊಡ್ಡ ಪ್ರಮಾಣದಲ್ಲಿ ರೈತರು ರಸ್ತೆ ತಡೆಯನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದ ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳು ಯಾವ ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಲಿಲ್ಲ. ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಬಂದಿದ್ದರೆ, ತಂಬಾಕು ಬೆಳೆಯತಕ್ಕ ರೈತರಿಗೆ ಯಾವ ರೀತಿಯ ಬೆಲೆ ಕೊಡುವ ಬಗ್ಗೆ ಸರ್ಕಾರ ಮಾತುಕತೆಯನ್ನು ಕೇಂದ್ರದ ಜೊತೆ ಮಾತನಾಡಿದೆಯೆ ? ಮಾತನಾಡಿದ್ದರೆ. ಇಲ್ಲಿ ಏತಕ್ಕೆ ಹೇಳಲಿಲ್ಲ ? ಈ ಎಲ್ಲ ವಿವರಗಳನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಆರ್. ಪಾಟೀಲ್.—ಅಧ್ಯಕ್ಷರೇ, ಕಳೆದ ೮-೧೦ ದಿವಸಗಳಿಂದ ನಮ್ಮ ಭಾಗದಲ್ಲಿ.....

ಚೇರ್ಮನ್.—ದಯವಿಮಾಡಿ ಕೇಳಿ, ನಿಯಮದ ಪ್ರಕಾರ ತಾವು ಮಾತನಾಡುವುದಕ್ಕೆ ಅವಕಾಶ ಇಲ್ಲ. ಅವಕಾಶ ಕೊಡಿ ಎಂದು ಕೇಳಿದರೆ, ಅವಕಾಶ ಕೊಡಬಹುದು.

ಶ್ರೀ ಎಂ.ಆರ್. ಪಾಟೀಲ್.—ಈ ವಿಷಯದ ಮೇಲೆ ನನಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಡಿ. ಮಾನ್ಯ ಅಧ್ಯಕ್ಷರೇ, ತಂಬಾಕು ಬೆಳೆಗಾರರು, ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಮತ್ತು ಸಂಕೇಶ್ವರ ಭಾಗದಲ್ಲಿರತಕ್ಕ ನಿಯಂತ್ರಿತ ಮಾರುಕಟ್ಟೆಯ ಅಧೀನದಲ್ಲಿ ಬರುತ್ತಾರೆ. ಹೀಗೆ ಬರುವುದಕ್ಕೆ ಅನೇಕ ಕಾಯಿದೆ ಕಾನೂನುಗಳು ಇದ್ದರೂ ಕೂಡ ವ್ಯಾಪಾರಸ್ಥರು ರೈತರನ್ನು ಶೋಷಣೆ ಮಾಡತಕ್ಕ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದರೂ, ಇದನ್ನು ನಿಲ್ಲಿಸುವುದಕ್ಕೆ ನಿಜವಾದ ಪ್ರಯತ್ನವನ್ನು ಮಾಡಲಿಲ್ಲ. ರೈತರು ತೆಗೆದುಕೊಂಡು ಹೋದಂತ ತಂಬಾಕನ್ನು ತೂಕ ಹಾಕಿ, ಖರೀದಿ ಮಾಡಿದ ಮೇಲೊ ಒಂದೆರಡು ದಿವಸದಲ್ಲಿ ಹಣ ಕೊಡತಕ್ಕ ಪ್ರಯತ್ನ ನಡೆಯುತ್ತಿಲ್ಲ. ಇದರ ಸಲುವಾಗಿ ರೈತರು ಇವತ್ತು ತಮ್ಮ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಅವರು ಕೇಳತಕ್ಕದ್ದು ನ್ಯಾಯವಾದ ಬೇಡಿಕೆ ಆದರ ಸಲುವಾಗಿ ಚಳುವಳಿ ಮಾಡುತ್ತಿದ್ದರು. ನೂರಾರು ಟ್ರಾಕ್ಟರುಗಳು ಇವತ್ತು ರಸ್ತೆ ಬದಿಯಲ್ಲಿ ನಿಂತಿವೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಇದನ್ನು ಸರ್ಕಾರ ತೀವ್ರವಾಗಿ ಗಮನಿಸಿ, ರೈತರು ಬೆಳೆದಂತೆ ತಂಬಾಕಿಗೆ ಯೋಗ್ಯ ಬೆಲೆ ಕೊಡುವುದರ ಜೊತೆಗೆ ವ್ಯಾಪಾರಸ್ಥರು ರೈತರನ್ನು ಶೋಷಣೆ ಮಾಡುವುದನ್ನು ತಪ್ಪಿಸಿ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಸ್. ಪಾಟೀಲ್.—ಸ್ವಾಮಿ, ನಾನು ಮಂತ್ರಿಗಳ ಹೇಳಿಕೆ ನೋಡಿದ ಮೇಲೆ, ಎರಡು ವಿಚಾರಗಳನ್ನು ತಿಳಿಸಬೇಕೆಂದು ಇಚ್ಛೆಪಡುತ್ತೇನೆ, ನಿಯೋಗ ಬಂದು, ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ, ಸಮಾಧಾನವಾಗಿ ಮನೆಗೆ ಹೋಗಿದ್ದಾರೆ. ವಿಚಾರ ವಿನಿಮಯ ಮಾಡಿದ ಮೇಲೆ ರಸ್ತೆ ಬಂದ್ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಮುಖ್ಯಮಂತ್ರಿಗಳಿಗೆ ತಿಳಿಸಿದರು. ಇವತ್ತು ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಏನು ತೀರ್ಮಾನ ಮಾಡಿದ್ದೀರಿ ಎನ್ನುವ ವಿಷಯ ಬರಬೇಕಾಗಿತ್ತು. ಇದು ಬಹಳ ಗಹನವಾದ ವಿಷಯ. ನಿಪ್ಪಾಣಿ ತಂಬಾಕು ಬೆಳೆಯತಕ್ಕ ಕೇಂದ್ರ ಸ್ಥಾನ, ಯಾವ ರೀತಿಯಲ್ಲಿ ಪರಿಹಾರ ಒದಗಿಸಿದೆ ಎನ್ನುವ ಬಗ್ಗೆ ರೈತರುಗಳಿಗೆ ಸಮಾಧಾನವಾಗುವ ಹಾಗೆ ಹೇಳಿಕೆಯನ್ನು ಸಭೆಯ ಮೂಲಕ ಕೊಡಬೇಕಾಗಿತ್ತು. ಅದನ್ನು ಮಾಡಲಿಲ್ಲ. ಇನ್ನೊಂದು ವಿಷಯ, ಇದು ಕೇಂದ್ರ ಸರ್ಕಾರದ ಜವಾಬ್ದಾರಿ ಎನ್ನುವ ಮಾತನ್ನು ಹೇಳಿದ್ದೀರಿ. ಇದು ಹಾರಿಕೆ ಉತ್ತರ, ಇದರಿಂದ ರೈತರುಗಳಿಗೆ ಸಮಾಧಾನವಾಗುತ್ತದೆಯೇ ? ಈ ವಿಚಾರದಲ್ಲಿಯೂ ಸಮಾಧಾನವಾಗುವ ಮಾತನ್ನು ಹೇಳಬೇಕಾಗಿತ್ತು. ಇವತ್ತು ರೈತರ ಕಾಸ್ಟ್ ಆಫ್ ಪ್ರೊಡಕ್ಷನ್ ೧೧ ರೂಪಾಯಿ ಪರ್ ಕೆ.ಜಿ. ಆಗುತ್ತೆ. It is unrealistic ಸರ್ಕಾರ ೪.೫೦ ಪೈಸೆ ನಿಗಧಿ ಮಾಡಿದೆ, ಇದನ್ನು ಯಾವ ಆಧಾರದ ಮೇಲೆ

ಮಾಡಿದ್ದೀರಿ ? ಅಗ್ರಿಕಲ್ಚರ್ ಪ್ರೈಸ್ ಕಮೀಷನ್ ನಿಯಮಾವಳಿ ಪರಿಶಿಷ್ಟ ೧೫ರಲ್ಲಿ ಲೇಬರ್ ಕಾಸ್ಟ್ ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ, ಇದನ್ನು ಅನುಸರಿಸಿ ಮಾಡಿದ್ದೀರಾ ? ಇವತ್ತು ರೈತನಿಗೆ ನಷ್ಟವಾಗುವುದನ್ನು ತಪ್ಪಿಸಬೇಕಾದರೆ, ಇವತ್ತು ಅವನಿಗೆ ಪರಿಹಾರ ಸಿಗಬೇಕಾದರೆ, ಇದನ್ನು ರೆಗ್ಯೂಲೇಟೆಡ್ ಮಾರುಕಟ್ಟೆ ವ್ಯಾಪ್ತಿಯಲ್ಲಿ ತರಬೇಕು. ಹಾಗೆ ಮಾಡಿದರೆ ರೈತನಿಗೆ ಆಗತಕ್ಕಂಥ ಶೋಷಣೆಯನ್ನು ತಪ್ಪಿಸಿದಂತಾಗುತ್ತದೆ ಇದು ನಿಮ್ಮ ಜವಾಬ್ದಾರಿ ಅಲ್ಲವೇ ? ಇದರಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿ ಏನಿದೆ ? ಇದರ ಬಗ್ಗೆ ನಿರ್ದಿಷ್ಟವಾದ ಉತ್ತರ ಕೊಡಬೇಕೆಂದು ಕೇಳುತ್ತೇನೆ.

SRI M. VEERAPPA MOILY.—Mr. Speaker Sir, the delegation of Tobacco growers of Nippani met the hon. Chief Minister on 17-3-1981. The hon. Chief Minister has assured the delegation that he will be going over to Delhi on 18th and take up this matter in all seriousness with the Central Minister for Agriculture. Of course, we have never said that we do not have any responsibility whatsoever with regard to the marketing of the Tobacco. As for as the Agriculture produce Marketing is concerned, the Government is well aware that these private merchants are evading the tobacco being brought to APMC. With regard to this, the hon. Chief Ministsr has emphatically assured the deligation that he would ensure the proper and effective enforcement of the rules and regulations under the law and see that the tobacco comes to the APMC so that these tobacco growers would get appropriate price for their tobacco.

SRI B.B. SAYANAK.—Sir, now they assuring. What they have done earlier?

SRI M. VEERAPPA MOILY.—Sir, we are going to tighten the rules to put an end to the malpractice with regard to the marketing of tobacco. We have already taken action in this behalf as far as our responsibility is concerned. With regard to the fixing of remunerative price or support price of the tobacco is concerned, the hon. Members may kindly recall that last year we did appoint a committee to fix up the remunerative price etc., but immediately we got the communication from the Ministry of Commerce, Government of India stating that the Government of Karnataka have no right whatsover to fix the price under the provisions of the Tobacco Board Act. It is an Act and unless some of us move for a change, it remains the same. It is an enactment passed by the Parliament, and therefore, fixing of levy price or support price is not at all within the jurisdiction of State Governments. It does not mean that we should and we will keep quite. We will have to take up the matter with the Government of India. The hon. Chief Minister has already left for Delhi. He has understood the seriousness of the matter. He has assured the delegation of the tobacco growers with all fource at his command to see that appropriate relief and proper remunerative price is given to the tobacco growers. The government is well aware of the hardship suffered by the tobacco growers. We will definitely take up the

matter with the Government of India. The matter with regard to the fixing or remunerative price or support price will have to be tackled by the Government of India. We will take all the necessary steps to put an end to this matter. I will again speak to the hon. Chief Minister at Delhi and see that the Tobacco Board or the Government of India comes to the rescue of these farmers immediately.

3.30 P.M.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಆಂಧ್ರ ಸರ್ಕಾರದವರು ಬೀಡಿ ಜೊಬ್ಯಾಕೋ ವರ್ಜಿನೀಯ ಟೊಬ್ಯಾಕೋಗೆ ಸಂಬಂಧಿಸಿದ ಹಾಗೆ ರೆಕಮಂಡರಿ ಬೋರ್ಡ್ ಮಾಡಿದ್ದಾರೆ, ಅದೇರೀತಿ ನಮ್ಮಲ್ಲೂ ಮಾಡಿದರೆ ಆಗಾಗ್ಗೆ ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಅನುಕೂಲವಾಗುತ್ತದೆ ಇದನ್ನು ಯೋಚನೆ ಮಾಡುತ್ತೀರಾ ?

SRI M. VEERAPPA MOILY.—This is a suggestion and we can definitely think of it and under the provisions of law, if we can constitute such Board, we can do so.

SRI B.B. SAYANAK.—Sir, on 17th there was discussion between the Chief Minister and the leaders of the agitators. The leaders assured the Chief Minister that they will withdraw the agitation. But still the agitation is going on. I would like to know why the agitation is going on till today.

SRI M. VEERAPPA MOILY.—On that day, in fact the Chief Minister also appreciated the persons who were on strike on the manner in which they have conducted the strike peacefully They have also assured in response to the call given by the Chief Minister that they will call off the strike in view of this assurance. I request through you Mr. Chairman, all the Members hailing from that area and also the farmers to call off the strike so that the Government's hands are strengthened to slove the problem as early as possible.

*re*:-**(ii) Disturbances at Nellur town, Channagiri Taluk, Shimoga District on 7-3-1981.**

SRI G. BASAVANNAPPA.—Sir, I call the attention of the Chief Minister to the disturbances at Nellur town, Channagiri taluk shimoga district, on 7-3-1981.

SRI M. VEERAPPA MOILY.—Sir, I wish to make the following statement on behalf of the Chief Minister.

1 It is reported that on 7-3-1981 at Nallur village in Shimoga District, a person belonging to one group abus d a person of another group alleging he was supporting pickpockets in the village. An alteration ensued. The elders of the village are reported to have intervened and pacified them.